**R.A. No:03/2024**
**PW:1**

(ಇಂದು ದಿನಾಂಕಃ **19-02-2025** ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

**<u>ಪಾಟೀ ಸವಾಲುಃ ಶ್ರೀ ಆರ್ ಎಂ ಆರ್ ವಕೀಲರಿಂದಃ</u>**

ನಾವು ನಮ್ಮ ಮನೆಯಲ್ಲಿ ಒಟ್ಟು 7 ಜನ ವಾಸವಿರುತ್ತೇವೆ. ನನಗೆ ಒಟ್ಟು 3 ಜನ ಗಂಡು ಮಕ್ಕಳು ಹಾಗೂ ಇಬ್ಬರು ಹೆಣ್ಣು ಮಕ್ಕಳು. ಸದರಿ ಇಬ್ಬರು ಹೆಣ್ಣು ಮಕ್ಕಳ ಮದುವೆಯಾಗಿರುತ್ತದೆ ಎಂದರೆ ಸರಿ. ಸದರಿ 3 ಜನ ಗಂಡು ಮಕ್ಕಳು ವಯಸ್ಕರಾಗಿರುತ್ತಾರೆ ಎಂದರೆ ಸರಿ. ಸದರಿಯವರಲ್ಲಿ ಇಬ್ಬರ ವಿವಾಹವಾಗಿರುತ್ತದೆ. ನಮ್ಮ ಮನೆಯಲ್ಲಿ ನಾನು, ನನ್ನ ಹೆಂಡತಿ, ಗಂಡು ಮಕ್ಕಳು ಹಾಗೂ ಸೊಸೆಯಂದಿರು ಎಲ್ಲಾ ಸೇರಿ ವಾಸವಿದ್ದೇವೆ ಎಂದರೆ ಸರಿ. ನಾನು ಗೋವಾ ರಾಜ್ಯದ ಮಾಪ್ಸಾ ಎನ್ನುವಲ್ಲಿ ಕೆಲಸಕ್ಕೆ ಹೋಗಿದ್ದೆ. ಸದರಿ ಸ್ಥಳದಲ್ಲಿ ನಾನು ಬಾಡಿಗೆ ಮನೆಯಲ್ಲಿ ವಾಸವಿದ್ದೇನು. ಸದರಿ ಮನೆಯಲ್ಲಿ ನಾವು 2 ವರ್ಷಗಳ ಕಾಲ ವಾಸವಿದ್ದೇವು. ನಾನು 2002 ಮತ್ತು 2003 ರಲ್ಲಿ ಗೋವಾದಲ್ಲಿ ವಾಸವಿದ್ದೇನು. ಎಫ್ ಡಿ ಪಿ ನಂಃ 24/2023 ರಲ್ಲಿ ನನಗೆ ನೋಟಿಸ ಬಂದಿರಬಹುದು ಆದರೆ ಗೊತ್ತಿಲ್ಲ. ಸದರಿ ಪ್ರಕರಣಲ್ಲಿ ಕೋರ್ಟ ಕಮಿಷನರ್ ರವರು ಅಳತೆ ಮಾಡಲು ಬರುವುದಾಗಿ ನನಗೆ ನೋಟಿಸ ನೀಡಿದ್ದರು ಎಂದರೆ ಸರಿಯಲ್ಲ.

2. ನನಗೆ ಯಾವ ಸಮಯದಲ್ಲಿ ಅನಾರೋಗ್ಯವಾಗಿತ್ತು ಎಂದು ನೆನಪಿಲ್ಲ. ನಾನು ಯಾವಾಗ ಆರೋಗ್ಯವಾಗಿದ್ದೆ ಎಂದು ನಿಖರವಾಗಿ ದಿನಾಂಕ ಮತ್ತು ವರ್ಷವನ್ನು ಹೇಳಲಾಗುವುದಿಲ್ಲ. ನಾನು ಸದರಿ ಅನಾರೋಗ್ಯಕ್ಕಾಗಿ ಕಿಮ್ಸ ಹುಬ್ಬಳ್ಳಿ ಹಾಗೂ ಸಿವಿಲ್ ಆಸ್ಪತ್ರೆ ಧಾರವಾಡನಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ನಾನು ಮೊದಲಿಗೆ ನವಲಗುಂದಕ್ಕೆ ಬಂದು ಕಿಮ್ಸ ಹುಬ್ಬಳ್ಳಿಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ನವಲಗುಂದ ಸರ್ಕಾರಿ ಆಸ್ಪತ್ರೆಯಲ್ಲಿ ನಾನು 2 ಗಂಟೆಗಳ ಕಾಲ ಇದ್ದು, ನಂತರ ನನ್ನನ್ನು ಅಂಬುಲೆನ್ಸ ನಲ್ಲಿ ಕಿಮ್ಸ ಆಸ್ಪತ್ರೆಗೆ ದಾಖಲಿಸಲಾಗಿರುತ್ತದೆ. ನನಗೆ ಕಾಲಿಗೆ ಹಾವು ಕಡಿದಿರುತ್ತದೆ. ಕಿಮ್ಸ ಹುಬ್ಬಳ್ಳಿಯಲ್ಲಿ ನಾನು 2 ದಿನಗಳ ಕಾಲ ದಾಖಲಾಗಿದ್ದೆ. ಶಾನವಾಡ ಗ್ರಾಮ ನನ್ನ ಹೆಂಡತಿಯ ತವರು ಮನೆ. ಸದರಿ ಕಿಮ್ಸ ಆಸ್ಪತ್ರೆಯಲ್ಲಿ ನನಗೆ ಹಾವು ಕಚ್ಚಿದ್ದರ ಕುರಿತು ದಾಖಲಾಗಿರುತ್ತೇನೆ.

3. ನಾನು ಮೂಲತಃ ಆಯಟ್ಟಿ ಗ್ರಾಮದ ನಿವಾಸಿ. ನಿಪಿ-8 ರಲ್ಲಿ ಕೆಂಪು ಶಾಹಿಯಿಂದ ಗೋವಾ ಎಂದು ಯಾರು ಬರೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-8 ರಲ್ಲಿ ನನ್ನ ಹೆಸರು ಹಾಗೂ ವಿಳಾಸವನ್ನು ನಾನೇ ಹೇಳಿ ಬರೆಸಿರುತ್ತೇನೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ನನಗೆ ಹಾವು ಕಚ್ಚಿದ್ದರ ಕುರಿತು ಬರೆಸಿರುವುದಿಲ್ಲ ಎಂದರೆ ಸರಿ. ನಾನು ಆಯಟ್ಟಿ ಗ್ರಾಮದಲ್ಲಿ ವಾಸವಿದ್ದು, ಗೋವಾಕ್ಕೆ ದುಡಿಯಲು ಹೋಗಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರರಿಗೆ ತೊಂದರೆ ಕೊಡಲು ವಿಳಂಬ ಮಾಡಿ ಮೇಲ್ಮನವಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಸುಳ್ಳು ಸಂಗತಿಗಳನ್ನು ತೋರಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**
**ನವಲಗುಂದ.**